ತಪಾಸಣೆ ಮಾಡುವವರು ಯಾರೂ ಇಲ್ಲ. ಅಧಿಕಾರಿಗಳನ್ನು ಕೇಳಿದರೆ, ಅದು ನಿಜವಲ್ಲ, ಕೆಲಸ ಸರಿಯಾಗಿ ನಡೆಯುತ್ತಿದೆ ಎಂದು ಹೇಳುತ್ತಾರೆ. ಈ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಈ ಯೋಜನೆಯಿಂದ ಮುಳುಗಡೆಯಾಗುವಂತಹ ೧೪ ಊರುಗಳ ವಿಚಾರದಲ್ಲಿ ಸರ್ಕಾರದವರು ಇಲ್ಲಿಯವರೆಗೆ ಬೇರೆ ಯಾವ ವ್ಯವಸ್ಥೆಯನ್ನೂ ಸಹ ಮಾಡಿಲ್ಲ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ, ಆಲಮಟ್ಟಿ ಯೋಜನೆಯಿಂದ ಕೆಲವು ಊರುಗಳಿಗೆ ಈಗ ಏನು ತೊಂದರೆ ಆಗಿದೆ. ಅದೇ ಪರಿಸ್ಥಿತಿ ಇಲ್ಲಿಯೂ ಆಗಬಹುದು. ಆದಕಾರಣ ಸರ್ಕಾರದವರು ಈ ಬಗ್ಗೆ ಎಚ್ಚರಿಕೆಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇಂತಹ ವಿಚಾರದಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಏನಾದರೂ ನೆವಾ ಹೇಳುತ್ತಾರೆ. ಇದು ಸರಿಯಲ್ಲ. ಸರ್ಕಾರದವರು ಇಂತಹ ವಿಚಾರದಲ್ಲಿ ಯೋಗ್ಯ ರೀತಿಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಬಾಗಲಕೋಟೆಯಲ್ಲಿ ಯಾವ ಕೆಲಸಗಳೂ ಸರಿಯಾಗಿ ಆಗುತ್ತಿಲ್ಲ. ಡ್ರೈನೇಜ್ ಕೆಲಸ ಪ್ರಾರಂಭವಾಗಿತ್ತು. ಆದರೆ ಕೆಲಸ ಮಾತ್ರ ಪ್ರಾರಂಭವಾಗಲಿಲ್ಲ ಜನತಾ ಬಜಾರ್ ಇನ್ನೂ ಪ್ರಾರಂಭವಾಗಲಿಲ್ಲ. ಕಾರಣ ಕೇಳಿದರೆ ಊರು ಮುಳುಗಡೆಯಾಗುತ್ತದೆಂದು ಹೇಳುತ್ತಾರೆ. ಈ ವಿಚಾರದಲ್ಲಿ ಸರ್ಕಾರದವರು ಕೂಡಲೇ ಒಂದು ಅಂತಿಮ ತೀರ್ಮಾನ ತೆಗೆದುಕೊಂಡು ಆ ಊರನ್ನು ಉಳಿಸುವುದಾದರೆ ಉಳಿಸಿ, ಇಲ್ಲವೇ ಮುಳುಗಿಸುವುದಾದರೆ ಬೇರೆ ಏನಾದರೂ ಒಂದು ವ್ಯವಸ್ಥೆ ಮಾಡಿ. ಏಕೆಂದರೆ, ಈಗ ಅಲ್ಲಿಯ ಜನರು ಜೀವ ಇದ್ದೂ ಸಹ ಇಲ್ಲದಂತೆ ಇದ್ದಾರೆ. ಇದು ನಮ್ಮ ದುರ್ದೈವ ಎಂದು ಹೇಳಬೇಕಾಗಿದೆ. ಹೇಳುವವರು ಮತ್ತು ಕೇಳುವವರು ಯಾರೂ ಇಲ್ಲದಂತೆ ಆಗಿದೆ. ಒಟ್ಟಿನಲ್ಲಿ ೮೦ ಸಾವಿರ ಜನರು ಇರತಕ್ಕಂಥ ನಮ್ಮ ಬಾಗಲಕೋಟೆ ಮುಳುಗಡೆಯಾಗದಂತೆ ನೋಡಿಕೊಳ್ಳಬೇಕೆಂದು ಮತ್ತೊಮ್ಮೆ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕೇಳಿಕೊಂಡು, ನನ್ನ ಹೆಸರು ಪಟ್ಟಿಯಲ್ಲಿ ಇಲ್ಲದಿದ್ದರೂ ಸಹ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Statement of Minister

re : Interim Report with recommendations of the Expert Committee on the grievances of the farmers of the state.

ಅಧ್ಯಕ್ಷರು.—ಈಗ ಮಾನ್ಯ ಕಂದಾಯ ಸಚಿವರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಸ್ ಬಂಗಾರಪ್ಪ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಅಗ್ರಿಕಲ್ಚರಿಸ್ಟ್ಸ ಗ್ರೀವನ್ಸ್‌ಸ್ ವಿಷಯದಲ್ಲಿ ಸರ್ಕಾರ ನೇಮಕ ಮಾಡಿದಂಥ ಎಕ್ಸ್‌ಪರ್ಟ್ ಕಮಿಟಿ ಈಗಾಗಲೇ ಸಾಕಷ್ಟು ಸಭೆಗಳನ್ನು ನಡೆಸಿದೆ. ಕಾಲ ಹೆಚ್ಚಿಗೆ ಇಲ್ಲದಿರುವುದರಿಂದ, ಸದನ ಅನೇಕ ದಿವಸಗಳ ಕಾಲ ನಡೆಯುತ್ತಾ ಇದ್ದುದರಿಂದ ಸರ್ಕಾರಿ ಆಫೀಸ್ ಅದಮೇಲೆ ಹೆಚ್ಚು ಸಭೆಗಳನ್ನು ನಡೆಸುವುದಕ್ಕೆ ಕಾಲವಿಲ್ಲದೇ ಇದ್ದರೂ ಕೂಡ, ಸಮಿತಿಯ ಅಧ್ಯಕ್ಷರಾಗಿರಬಹುದು, ಆದರೂ ಕೆಲವು ಸಾರಿ ಸದನ ಬೇಗ್ಗೆ ಪ್ರಾರಂಭವಾಗುವುದಕ್ಕಿ ಮೊದಲೂ ಮತ್ತು ಸದನ ಲೇಟಾಗಿ ಮುಗಿದ ಮೇಲೂ ಕೂಡ ಅನೇಕ ಸಭೆಗಳನ್ನು ನಡೆಸಿ ತಾತ್ಕಾಲಿಕ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ. ಅಂತಿಮ ವರದಿಯನ್ನು ಸುಮಾರು ಆಕ್ಟೋಬರ್ ತಿಂಗಳ ಹೊತ್ತಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ೧೯ ಜಿಲ್ಲೆಗಳಲ್ಲಿ ಈ ಒಂದು ಸಮಿತಿ ಪ್ರವಾಸ ಮಾಡಿ ರೈತರ ವಿಷಯಗಳನ್ನು ಖುದ್ದಾಗಿ ಕೇಳಿಕೊಂಡು ಬರಬೇಕು ಎನ್ನುವಕ್ಕ ಅಭಿಪ್ರಾಯವನ್ನು ನಾವು ಇಟ್ಟುಕೊಂಡಿದ್ದೇವೆ.

SRI M. C. BASAPPA.—The committee was constituted by the Government. He has given the report of the Government. If he wants to appraise this House, better supply the copies.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ರೈತರ ಗ್ರೀವನ್ಸ್‌ಸ್ ಸಲುವಾಗಿ ಮಾನ್ಯ ಸದಸ್ಯರು ಸುಮಾರು ೭ ಡಿಮ್ಯಾಂಡ್‌ಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆದರ ಬಗ್ಗೆ ನಾಳೆ ನಮ್ಮ ಅಭಿಪ್ರಾಯ ಪ್ರಕಟ ಮಾಡುತ್ತೇವೆಂದು ನಾವು ತಿಳಿಸಿದೆವು. ಅದನ್ನು ಸರ್ಕಾರದವರು ಪ್ರಕಟ ಮಾಡುತ್ತಾರೆ. ಅತನ್ಮಧ್ಯೆ ಈ ಒಂದು ತಾತ್ಕಾಲಿಕ ವರದಿಯನ್ನು ನಾವು ಕೊಟ್ಟಿದ್ದೇವೆ. ಅದನ್ನು ಆ ಸದನದಲ್ಲಿ ನಾವು

ಮಂಡನೆ ಮಾಡಿದ್ದೇವೆ. ಆದೇ ರೀತಿ ಈ ಸದನದಲ್ಲೂ ಮಂಡನೆ ಮಾಡುತ್ತಿದ್ದೇನೆ. ಇವತ್ತು ಸಾಯಂಕಾಲದೊಳಗೆ ಇದರ ನಕಲು ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಬರುತ್ತದೆ. ಇದನ್ನು ಈ ಸದನದ ಮುಂದೆ ಇಡುತ್ತಿದ್ದೇನೆ The List of the recommendations made by the committee as recommended in its interim report submitted to the Government will be supplied to all the Hon. Members.

ಶ್ರೀ ಕೆ. ಎಚ್. ಶ್ರೀನಿವಾಸ್. – ಈ ಸಮಿತಿಯ ಅಧ್ಯಕ್ಷರು ಮಾನ್ಯ ವ್ಯವಸಾಯ ಸಚಿವರು ಇದು ಎಕ್ಸಪರ್ಟ್ ಕಮಿಟಿ ರಿಪೋರ್ಟ್ ಎಂದು ಹೇಳುತ್ತಾರೆ. ಆ ಸಮಿತಿಯು ತಾತ್ಕಾಲಿಕ ವರದಿಯ ಜಿಸ್ಟನ್ನು, ಅದರ ಕಾಪಿಯನ್ನು, ಅದರ ಶಿಫಾರಸನ್ನು ಎಲ್ಲರಿಗೂ ಕೊಡುತ್ತೇವೆಂದು ಹೇಳಿದ್ದಾರೆ. ನಾನು ಕೇಳುವುದೇನೆಂದರೆ, ಈ ರೆಕಮೆಂಡೆಷನ್ ಬಗ್ಗೆ ಸರ್ಕಾರದ ಅಭಿಪ್ರಾಯವೇನು? ಏಕೆಂದರೆ, ಸಂಬಂಧಪಟ್ಟ ಇಲಾಖೆಯ ಮಾನ್ಯ ಸಚಿವರೇ, ಪ್ರಾಮುಖ್ಯ ಖಾತೆಯನ್ನು ಹೊಂದಿರುವ ಮಾನ್ಯ ಸಚಿವರೇ ಈ ಈ ಎಕ್ಸಪರ್ಟ್ ಕಮಿಟಿಯ ಛೇರ್ಮನ್ನರಾಗಿರುವಾಗ ಅವರು ಮಾಡಿರುವ ಶಿಫಾರಸುಗಳಲ್ಲಿ ೧೦೦ಕ್ಕೆ ೯೦ ಭಾಗವನ್ನು ಸರ್ಕಾರ ಒಪ್ಪಿಕೊಂಡಿದೆ ಎಂದು ನಾವು ಭಾವನೆ ಮಾಡಿಕೊಳ್ಳಬೇಕಾಗಿದೆ. ಸಮಿತಿಯ ವರದಿ ಪೇಪರಿನಲ್ಲಿ ಬಂದ ಮಾತ್ರಕ್ಕೆ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ತಾವು ವ್ಯಾಪಕವಾದಂಥ ಶಿಫಾರಸುಗಳನ್ನು ಬಹಳ ಚೆನ್ನಾಗಿ ಮಾಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಕೆಲವು ಶಿಫಾರಸುಗಳು ಗೊತ್ತಿದ್ದರೂ ನೀವು ಅಧಿಕೃತವಾಗಿ ಪ್ರಕಟಣೆಮಾಡಿ ಕೊಡುವುದಕ್ಕೆ ಮುಂಚೆ ಹೇಳುವುದು ಚೆನ್ನಾಗಿಲ್ಲ. ನಮಗೆ ಏನು ಅನ್ನಿಸುತ್ತದೆಯೆಂದರೆ, ನಿಮ್ಮ ಸಮಿತಿಯ ಶಿಫಾರಸುಗಳು ಕಾರ್ಯಗತವಾದರೆ ಬಹುಶಃ ರೈತರ ಸಮಸ್ಯೆಗಳು ಬಹಳ ದೊಡ್ಡ ರೀತಿಯಲ್ಲಿ ಪರಿಹಾರವಾಗುತ್ತವೆ ಎನ್ನುವ ವಿಶ್ವಾಸವಿದೆ. ಸಮಿತಿಯು ವರದಿಗಿಂತ ಹೆಚ್ಚಾಗಿ ಸಂಬಂಧಪಟ್ಟ ಖಾತೆಯ ಮಾನ್ಯ ಸಚಿವರೇ ಸಮಿತಿಯ ಅಧ್ಯಕ್ಷರಾಗಿರುವುದರಿಂದ ಅವರು ಮಾಡಿರತಕ್ಕ ಶಿಫಾರಸುಗಳಲ್ಲಿ ೧೦೦ಕ್ಕೆ ೯೦ ಭಾಗವನ್ನು ಸರ್ಕಾರ ಒಪ್ಪಿಕೊಂಡಿದೆಯೇ ಎನ್ನತಕ್ಕ ವಿಷಯವನ್ನು ನಾವು ತಿಳಿದುಕೊಳ್ಳುವುದಕ್ಕೆ ಬಹಳ ಉತ್ಸುಕರಾಗಿದ್ದೇವೆ.

ಶ್ರೀ ಎಸ್ ಬಂಗಾರಪ್ಪ. – ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ. ಎಚ್ ಶ್ರೀನಿವಾಸ್ ಅವರು ಸಮಿತಿಯ ಕೆಲಸವನ್ನು ನಾನು ಸಚಿವನಾಗಿ, ಅಧ್ಯಕ್ಷನಾಗಿ ಮಾಡಿದ್ದೇನೆಂದು ಹೇಳಿದ್ದಾರೆ. ನಾವು ವರದಿಯನ್ನು ಕೊಡತಕ್ಕ ಕಾಲದಲ್ಲಿ ಸ್ಪಷ್ಟಪಡಿಸಿದ್ದೇವೆ. ಸರ್ಕಾರ ನಾವು ನಡೆಸುತ್ತೇವೆ, ಮತ್ತೊಬ್ಬರು ನಡೆಸುತ್ತಾರೆ ಎನ್ನತಕ್ಕ ಪ್ರಶ್ನೆಯಲ್ಲ. ನಾವು ರೈತರ ಸಮಸ್ಯೆಗಳ ಬಗ್ಗೆ ಗಂಭೀರ ದೃಷ್ಟಿಯಿಂದ ರೆಕಮೆಂಡೇಷನ್ ಮಾಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ರೈತರ ಕೃಷಿಕರು ಏನಿದ್ದಾರೆ, ಅವರ ತೊಂದರೆಗಳೇನು, ಅವರ ಕಷ್ಟಸುಖಗಳೇನು? ಬೆಳಗಳಿಗೆ ಆಗತಕ್ಕ ಖರ್ಚು, ಟೋಟಲ್ ಕಾಸ್ಟ್ ಆಫ್ ಕಲ್ಟಿವೇಷನ್ ಮತ್ತು ಬೇರೆ ಬೇರೆ ಸಮಸ್ಯೆಗಳನ್ನು ಕೂಲಂಕುಷವಾಗಿ ನೋಡತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿದ್ದೇವೆ. ನಾವು ನಮ್ಮ ವರದಿಯಲ್ಲಿ ಸಲಹಾ ರೂಪದಲ್ಲಿ ರೆಕಮೆಂಡೇಷನ್‌ನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದೇವೆ. ನಾನು ವಾಂತ್ರಿಯಾಗಿ ಮತ್ತು ಅಧ್ಯಕ್ಷನಾಗಿ ಎರಡು ಕೆಪಾಸಿಟಿಯಲ್ಲಿ ಹೇಳುತ್ತಿದ್ದೇನೆ. ಸರ್ಕಾರದವರು ಅದನ್ನು ವಿಚಾರಮಾಡಿ ನಮ್ಮ ತೀರ್ಮಾನಗಳೇನು ಎನ್ನುವುದರ ಬಗ್ಗೆ ಹೇಳತಕ್ಕವರಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಬೆಲೆಗಳ ಬಗ್ಗೆ ನಾವು ರೆಕಮೆಂಡೇಷನ್ ಮಾಡಿದ್ದೇವೆ. ಇದರ ಬಗ್ಗೆ ತೀರ್ಮಾನ ಮಾಡಬೇಕಾದರೆ, ಎ. ಪಿ ಸಿ ಯಲ್ಲಿ ಪ್ರೈಸ್ ಕಮಿಷನ್‌ನವರು ಏನು ಅಭಿಪ್ರಾಯ ಇಟ್ಟು ಕೊಂಡಿದ್ದಾರೋ ಅದನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ತೀರ್ಮಾನ ಮಾಡಬೇಕಾಗುತ್ತದೆ. ಕೆಲವು ವಿಷಯಗಳು ಶೀಘ್ರವಾಗಿ ತೀರ್ಮಾನವಾಗುತ್ತದೆ. ಕರ್ನಾಟಕ ರಾಜ್ಯ ಸರ್ಕಾರದ ರೈತರ ಬೇಡಿಕೆಗಳು ಅಂದರೆ ಬೆಟರ್‌ಮೆಂಟ್ ಲೆವಿ, ವಾಟರ್ ರೇಟ್, ಪ್ಯೂಂಟಿನೆನ್ಸ್, ಸೆಸ್, ಬೆಲೆಗಳ ಬಗ್ಗೆ ಮತ್ತು ಬೇರೆ ಬೇರೆ ಅನೇಕ ವಿಷಯಗಳು ಇದರಲ್ಲಿವೆ, ಆ ವಿಷಯಗಳ ಬಗ್ಗೆ ಅಂತಿಮವಾದ ತೀರ್ಮಾನವನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುತ್ತದೆ. ಮತ್ತೆ ಕೆಲವು ವಿಷಯಗಳನ್ನು ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ ಆ ತೀರ್ಮಾನಗಳನ್ನು ಪ್ರಕಟ ಮಾಡುವವರಿದ್ದೇವೆ. ಸದನ ಜಾಸ್ತಿ ದಿವಸ ಇದ್ದಿದ್ದರೆ ಹೇಳಬಹುದಾಗಿತ್ತು. ರಾಜ್ಯದ ಕೃಷಿಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ತೀರ್ಮಾನ ಮಾಡಿ ಪ್ರಕಟ ಮಾಡುತ್ತೇವೆ. ಉಳಿದಿರತಕ್ಕ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ ೧೦೦ಕ್ಕೆ ೯೦–೯೫ ರಷ್ಟು ಅಂದಾಜು ರಾಜ್ಯ ಸರ್ಕಾರಕ್ಕೆ ಸಂಬಂಧಪಡುವಂಥಾದ್ದಿದೆ. ಸುಮಾರಾಗಿ ಕೇಂದ್ರ ಸರ್ಕಾರದ ಜೊತೆಗೆ ಸಮಾಲೋಚನೆ ಮಾಡತಕ್ಕ ವಿಷಯಗಳ ಬಗ್ಗೆ ತಕ್ಷಣ ಹೇಳುವುದಕ್ಕಾಗುವುದಿಲ್ಲ. ಇದನ್ನು ತಾವೂ

ಒಪ್ಪುತ್ತೀರಿ. ಉಳಿದಿರತಕ್ಕ ರೆಕಮೆಂಡೇಷನ್ಸ್ ನೂರಕ್ಕೆ ೯೦-೯೫ ರಷ್ಟು ಹತ್ತಿರ ಹತ್ತಿರ ಹೋಗುತ್ತದೆ. ಅದನ್ನು ರಾಜ್ಯ ಸರ್ಕಾರ ಒಪ್ಪುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆ ತೀರ್ಮಾನಗಳನ್ನು ಸದ್ಯದಲ್ಲೇ ನಾವು ಪ್ರಕಟ ಮಾಡುತ್ತೇವೆ.

Demands for grants for the year 1980-81
(General discussion Contd)

† ಶ್ರೀ ಕೆ. ಪ್ರಭಾಕರ್ (ನೆಲಮಂಗಲ). — ಮಾನ್ಯ ಅಧ್ಯಕ್ಷರೇ ಈಗ ನಾವು ಒಂದು ಯೋಜನಾ ಯುಗದಲ್ಲಿ, ವೆಲ್‌ಫೇರ್ ಸ್ಟೇಟ್ ಎನ್ನುವುದರಲ್ಲಿದ್ದೇವೆ ಎನ್ನುವುದನ್ನು ಮನಗಂಡು ಅದಕ್ಕೆ ತಕ್ಕಹಾಗೆ ಆನೂಚಾನವಾದಂಥ ಸರ್ಕಾರದ ಪದ್ಧತಿಗಳು ಮತ್ತು ಪೋಲೀಸ್ ಆಡಳಿತ ಯಾವ ರೀತಿ ಇತ್ತು ಎನ್ನುವುದನ್ನು ಅರಿತವರಾಗಿದ್ದೇವೆ. ಈಗ ವೆಲ್‌ಫೇರ್ ಸ್ಟೇಟ್ ಅಂದಮೇಲೆ ಆದರ ರಿಕ್ವೈರ್‌ಮೆಂಟ್ಸ್ ಅಂದರೆ ಜನಗಳ ಅಭಿಮತ ಮತ್ತು ಅವರಿಗೆ ಸರ್ಕಾರದ ಮುಖಾಂತರ ದೊರೆಯತಕ್ಕ ಸೌಲಭ್ಯಗಳು ದೊರೆಯುವುದರಲ್ಲಿ ಆಡಳಿತವನ್ನು ನಡೆಸುತ್ತಾ ಇರತಕ್ಕವರ ಆದೇಶದಂತೆ ಅಧಿಕಾರಿಗಳು ಯಾವರೀತಿ ತಮ್ಮ ಮನಸ್ಸನ್ನು ಪರಿವರ್ತನೆ ಮಾಡಿಕೊಂಡು ಚೆನ್ನಾಗಿ ತಮ್ಮ ಕರ್ತವ್ಯಗಳನ್ನು ಪಾಲನೆಮಾಡಬೇಕು ಎನ್ನುವುದರಲ್ಲಿ ಬದಲಾವಣೆಯಾಗಬೇಕು ಎಂದು ಪ್ರಜೆಗಳು ನಿರೀಕ್ಷಣೆ ಮಾಡತಕ್ಕಂಥಾದ್ದು ಒಂದು ಭಾಗ. ಇದು ಆಗಲಿಲ್ಲ ಅಂದರೆ, ಸಮಸ್ಯೆಗಳು ಎಲ್ಲೆಲ್ಲಿ ಬರುತ್ತವೋ ಆಗ ಸರ್ಕಾರದ ಉದ್ದೇಶ ನೆರವೇರುವುದಿಲ್ಲ ಎನ್ನುವುದನ್ನು ಮನಗಂಡು ಸೂಕ್ತರೀತಿಯಲ್ಲಿ ಅವರಿಗೆ ಮಾರ್ಗದರ್ಶನ ಕೊಡಿಸತಕ್ಕಂಥಾದ್ದು ಸೂಕ್ತ.. ಎಲ್ಲರಿಗೂ ಒಳ್ಳೆಯ ಅವಕಾಶಗಳು ಇರಬೇಕು, ಎಲ್ಲರೂ ಸಖವಾಗಿರಬೇಕು, ಸುಖೀರಾಜ್ಯವೇ ನಮ್ಮ ಗುರಿ. ಇದರಲ್ಲಿ ಮುಖ್ಯವಾದುದು ಒಂದು ಕುಟುಂಬಕ್ಕಾದರೂ ಅಂದರೆ ಕುಟುಂಬದಲ್ಲಿ ಒಬ್ಬರಿಗಾದರೂ ಸರ್ಕಾರದ ನೌಕರಿ ದೊರೆಯುವ ವ್ಯವಸ್ಥೆ ಇರಬೇಕು. ಒಂದು ಕುಟುಂಬದಲ್ಲಿ ಹಲವಾರು ಭಾಗದಿಂದ ಬಂದರೆ ಒಂದೇ ಕುಟುಂಬಕ್ಕೆ ನಾಲ್ಕೈದು ವರಮಾನದ ಮಾರ್ಗಗಳಿರುವುದು ತಪ್ಪಬೇಕು.

ಈ ಸಾಮೂಹಿಕ ಬೇಸಾಯಕ್ಕೆ ಸೇರಿದಂತೆ ಒಂದು ಕಮ್ಯೂನಿಟಿ ಇರಿಗೇಷನ್ ವೆಲ್ಸ್ ಎಂದು ತಾವು ಏನು ಕರೆಯುತ್ತೀರಿ ಅದನ್ನು ಹೆಚ್ಚು ಹೆಚ್ಚು ಮಾಡಿ ಬಡವರಿಗೆ ಹೆಚ್ಚಿನ ಸೌಕರ್ಯ ಮತ್ತು ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಹೇಳುತ್ತೇನೆ. ಆದರೆ ಅವರಿಗೆ ಸಾಲವನ್ನು ಕೊಡತಕ್ಕದ್ದು ಒಳ್ಳೆಯ ಮಾರ್ಗವಲ್ಲ ಎನ್ನತಕ್ಕದ್ದನ್ನು ಅನುಭವದಿಂದ ಕಂಡುಕೊಂಡಾಗಿದೆ. ಮತ್ತೆ ಹುದ್ದೆ ಕೊಡುವುದರಲ್ಲಿ ನೌಕರಿ ಕೊಡುವುದರಲ್ಲಿ ಭೂಮಿಗೆ ಸಾಲವನ್ನು ಒದಗಿಸಿ ಕೊಡುವುದರಲ್ಲಿ ಬಡ ಜನರಿಗೆ ಇನ್ನಿತರ ಸೌಲಭ್ಯಗಳನ್ನು ದೊರಕಿಸಿ ಕೊಡುವುದರಲ್ಲಿ ಹೆಚ್ಚಿನ ಶ್ರದ್ಧೆಯಿಂದ ಮಡಿಯತಕ್ಕ ಅಧಿಕಾರಿಗಳ ಒಂದು ಶ್ರಮಕ್ಕೆ ಒಂದು ಪ್ರೋತ್ಸಾಹ ಬೆಂಬಲವಿರಬೇಕು. ಆದರೆ ಕೆಲವು ಬುದ್ಧಿವಂತರು ನಾನಾ ಕಾರಣಗಳಿಂದ ಇವುಗಳನ್ನು ತಪ್ಪಿಸಿ ಅನೇಕ ರೀತಿಯಲ್ಲಿ ತೊಂದರೆಯನ್ನು ಕೊಡುತ್ತಾರೆ, ಅಂಥವರ ಮೇಲೆ ನಿಗಾ ಇಟ್ಟು ಅಂಥವರಿಗೆ ಉಗ್ರ ಶಿಕ್ಷೆಯನ್ನು ಕೊಟ್ಟರೆ ಇನ್ನಿತರ ಅಧಿಕಾರಿಗಳೂ ಸಹ ಎಚ್ಚೆತ್ತುಕೊಳ್ಳುತ್ತಾರೆ. ಆದುದರಿಂದ ಅಂಥಾ ಅಧಿಕಾರಿಗಳ ಕೈವಾಡ ನಡೆಯದಂತೆ ಸರ್ಕಾರದವರು ಸರಿಯಾದ ರೀತಿಯಲ್ಲಿ ಆಡಳಿತ ವ್ಯವಸ್ಥೆಯನ್ನು ಮಾಡಬೇಕು. ಮತ್ತೆ ನಿಜಾಂಶ ಮತ್ತು ಸತ್ಯಾಂಶ ಯಾರಿಂದಲೇ ಬರಲಿ ಅದು ವಿರೋಧ ಪಕ್ಷದವರಿಂದ ಮತ್ತೆ ಯಾವದೇ ಪಕ್ಷದಿಂದ ಬಂದರೂ ಕೂಡ ಅದಕ್ಕೆ ಸರಿಯಾದ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ನ್ಯಾಯವನ್ನು ದೊರಕಿಸಿ ಕೊಡತಕ್ಕ ಬಗ್ಗೆ ನಿಗಾ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ನಾವು ನಿನ್ನೆಯಿಂದ ಇಲ್ಲಿಯತನಕ ಹೇಳಿ ಮುಗಿಸಿದ್ದೇವೆ ಆದರೆ ಅದು ಕಾರ್ಯಾಚರಣೆಯಲ್ಲಿ ಎಷ್ಟರಮಟ್ಟಿಗೆ ಬರುತ್ತದೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ. ಮತ್ತೆ ಅದಕ್ಕಾಗಿ ಅವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಅದಕ್ಕೆ ಎಲ್ಲಾ ರೀತಿಯ ಸಹಕಾರವನ್ನು ಕೊಡತಕ್ಕದ್ದು ನಮ್ಮೆಲ್ಲರ ಕರ್ತವ್ಯವೂ ಆಗಿದೆ.

ಇನ್ನು ಕೂಲಿಗಾಗಿ ಕಾಳು ಮತ್ತು ಉದ್ಯೋಗ ಧೃಡೀಕರಣ ಯೋಜನೆಗಳು, ಅವುಗಳ ರೂಪದಲ್ಲಿ ಒಳ್ಳೆಯವಿವೆ, ಆದರೆ ಅವುಗಳನ್ನು ಕಾರ್ಯಾಚರಣೆಯಲ್ಲಿ ತರುವಾಗ ಕೆಲವರು ಅಶ್ರದ್ಧೆಯಿಂದ ಸರಿಯಾಗಿ